# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1138 |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ. ಗೌಡ |
| ಉತ್ತರಿಸುವ ದಿನಾಂಕ | 18.12.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಎ-ಗ್ರೇಡ್, ಬಿ-ಗ್ರೇಡ್ ಮತ್ತು ಸಿ-ಗ್ರೇಡ್ ದೇವಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು) | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೊಳಪಡುವ ಅಧಿಸೂಚಿತ ಸಂಸ್ಥೆಗಳ ಸಂಖ್ಯೆಯ ವಿವರ ಕೆಳಕಂಡಂತಿದೆ. (ಸಂಸ್ಥೆಗಳ ಮಾಹಿತಿಯನ್ನು **ಅನುಬಂಧ-1ರ ಸಿ.ಡಿ.**ಯಲ್ಲಿ ಒದಗಿಸಿದೆ) ಮಾಹಿತಿಯು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.<br><br>**ಕ್ರ. ಸಂ.** \| **ಪ್ರವರ್ಗ** \| **ಸಂಸ್ಥೆಗಳ ಸಂಖ್ಯೆ**<br>1 \| 'ಎ' \| 205<br>2 \| 'ಬಿ' \| 193<br>3 \| 'ಸಿ' \| 34166<br>**ಒಟ್ಟು** \| **34564** |
| ಆ) | ಕಳೆದ ಐದು ವರ್ಷಗಳಲ್ಲಿ ಸದರಿ ದೇವಾಲಯಗಳ ಹುಂಡಿಗೆ ಬಂದ ಕಾಣಿಕೆ ಹಣವೆಷ್ಟು; ಮತ್ತು ಸದರಿ ಹಣವನ್ನು ಯಾವ ದೇವಾಲಯಕ್ಕೆ ಎಷ್ಟು ವೆಚ್ಚ ಮಾಡಲಾಗಿದೆ; (ವರ್ಷವಾರು, ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳ ಪೈಕಿ ಪ್ರವರ್ಗ 'ಎ' ಮತ್ತು 'ಬಿ' ವರ್ಗದ ದೇವಾಲಯಗಳಲ್ಲಿ ಭಕ್ತಾದಿಗಳಿಂದ ದೇಣಿಗೆ/ಹುಂಡಿ ಇತ್ಯಾದಿ ಮೂಲಗಳಿಂದ ಸಂಗ್ರಹವಾಗಿರುವ ಆದಾಯದ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ. (ಮಾಹಿತಿಯು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು. ) |
| ಇ) | ದೇವಾಲಯಗಳ ಹುಂಡಿಗೆ ಬಂದ ಹಣವನ್ನು ವೆಚ್ಚ ಮಾಡಲು ಇರುವ ಮಾರ್ಗಸೂಚಿಗಳೇನು; | ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಭಕ್ತರು ನೀಡಿರುವ ಕಾಣಿಕೆ, ಹರಕೆಸೇವೆ ಇತ್ಯಾದಿಗಳ ಮೂಲಕ ಬರುವ ಆದಾಯವನ್ನು ಆಯಾಯ ದೇವಾಲಯಗಳ ನಿಧಿ (ಬ್ಯಾಂಕ್ ಖಾತೆ)ಗೆ ಜಮಾ ಮಾಡಲಾಗುತ್ತದೆ. ಅಧಿಸೂಚಿತ ದೇವಾಲಯಗಳಿಗೆ ಬರುವ ಆದಾಯವನ್ನು ಆಯಾಯ ದೇವಾಲಯಗಳ ಬ್ಯಾಂಕ್ ಖಾತೆಯಲ್ಲಿ ಸಂಗ್ರಹಿಸಿ ದೇವಾಲಯದ ನಿರ್ವಹಣೆಗೆ ನಿತ್ಯಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ/ಜೀರ್ಣೋದ್ಧಾರ ಮತ್ತು ಮೂಲ ಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಮುಜರಾಯಿ ಇಲಾಖೆಯ ದೇವಾಲಯದ ಹಣ ಅನ್ಯ ಧರ್ಮದ ಉದ್ದೇಶಕ್ಕೆ ಬಳಸುವುದಿಲ್ಲ ಎಂದು ಬೋರ್ಡ್ ಹಾಕಲು ಸರ್ಕಾರ ನಿರ್ಧರಿಸಿದೆಯೇ; ನಿರ್ಧರಿಸಿದ್ದರೆ ಹೀಗೆ ಬೋರ್ಡ್ ಹಾಕಲು ಕಾರಣವೇನು; | ಮುಜರಾಯಿ ಇಲಾಖೆಯ ದೇವಾಲಯದ ಹಣ ಅನ್ಯ ಧರ್ಮದ ಉದ್ದೇಶಕ್ಕೆ ಬಳಸುವುದಿಲ್ಲವಾದ್ದರಿಂದ, ನಾಮಫಲಕ (ಬೋರ್ಡ್) ಅಳವಡಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ. |
| ಉ) | ರಾಜ್ಯದ ಎಷ್ಟು ದೇವಾಲಯಗಳ ಆಸ್ತಿಗಳ ಒತ್ತುವರಿಯಾಗಿದೆ; ಸದರಿ ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) | ರಾಜ್ಯದಲ್ಲಿ 236 ದೇವಾಲಯಗಳ ಆಸ್ತಿಗಳು ಒತ್ತುವರಿಯಾಗಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-3 ರ**ಲ್ಲಿ ಒದಗಿಸಿದೆ.<br><br>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಾಲಯಗಳಿಗೆ ಸೇರಿದ ಸ್ಥಿರ ಸ್ವತ್ತುಗಳನ್ನು ಸಂರಕ್ಷಣೆ ಮಾಡಲು ಮತ್ತು ಸ್ವತ್ತಿನಿಂದ ಅನಧಿಕೃತದಾರರನ್ನು ತೆರವುಗೊಳಿಸಿ ದೇವಾಲಯಗಳ ಆಸ್ತಿಯನ್ನು ಹಿಂಪಡೆಯುವ ಉದ್ದೇಶದಿಂದ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.<br><br>ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಎನ್.ಐ.ಸಿ ಯ ಮೂಲಕ ಆನ್‌ಲೈನ್ ತಂತ್ರಾಂಶ (INTEGRATED TEMPLE MANAGEMENT SYSTEM / ITMS) ವನ್ನು ಜಾರಿಗೆ ತರಲಾಗಿದೆ. ಸದರಿ ತಂತ್ರಾಂಶದಲ್ಲಿ ಹಂತ ಹಂತವಾಗಿ ದೇವಾಲಯಗಳ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿ ಮತ್ತು ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಾಡ್ಯೂಲ್‌ಗಳನ್ನು ಅಭಿವೃದ್ಧಿಪಡಿಸಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿದೆ.<br><br>• ಅಧಿಸೂಚಿತ ದೇವಸ್ಥಾನಗಳ ಜಾಗಗಳಲ್ಲಿನ ಒತ್ತುವರಿದಾರರು/ ಅನಧಿಕೃತದಾರರನ್ನು ತೆರವು ಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ಹಾಗೂ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ಹಾಗೂ ದಾಖಲಾಗಿರುವ ಪ್ರಕರಣಗಳಿಗೆ ಕಂಡಿಕೆವಾರು ಆಕ್ಷೇಪಣೆಗಳನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ ಕಂಇ 49 ಮುಆಬಿ 2021 ದಿನಾಂಕ:05-09-2022ರ ಆದೇಶದಲ್ಲಿ ಮುಜರಾಯಿ ಅಧಿಸೂಚಿತ ಸಂಸ್ಥೆಗಳ ಜಮೀನುಗಳ ಸಂರಕ್ಷಣೆಗೆ ಮೊದಲ ಹಂತದಲ್ಲಿ ಎಲ್ಲಾ "ಎ" ಮತ್ತು "ಬಿ" ಶ್ರೇಣಿಯ ಹಾಗೂ ಮಹಾನಗರ ಪಾಲಿಕೆ ನಗರ ಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ಪ್ರದೇಶದಲ್ಲಿರುವ "ಸಿ" ಶ್ರೇಣಿಯ ಮುಜರಾಯಿ ಆಸ್ತಿಗಳ ಬಾಬ್ತು, ಹಕ್ಕು ದಾಖಲೆಗಳ ಇಂಡೀಕರಣ ಅಳತೆ ಕಾರ್ಯ ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆ ಇತ್ಯಾದಿ ಕೆಲಸಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಿ ಮುಜರಾಯಿ ಇಲಾಖೆಯ ನಂತರ ಗ್ರೂಪ್ 'ಸಿ' ಶ್ರೇಣಿಯ ದೇವಾಲಯಗಳ ಹಕ್ಕು ದಾಖಲೆಗಳ ಇಂಡೀಕರಣ ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ ಕಾರ್ಯರೂಪಕ್ಕೆ ತರಲು ಕಟ್ಟುನಿಟ್ಟಿನ ಸೂಚನೆ ಯನ್ನು ನೀಡಲಾಗಿದೆ.<br>• ಅದರಂತೆ ಮುಜರಾಯಿ ಇಲಾಖೆಯ ಸ್ಥಿರಾಸ್ತಿಗಳ ಸಂರಕ್ಷಣ ಕಾರ್ಯಗಳಾದ ಇಂಡೀಕರಣ, ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
ತೆರವುಗೊಳಿಸುವಿಕೆಯಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ಈ ಕೆಳಕಂಡ ರಾಜ್ಯ ಮಟ್ಟದ/ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಸರ್ಕಾರದಿಂದ ಆದೇಶಿ ಸಲಾಗಿದೆ.<br><br>
ರಾಜ್ಯ ಮಟ್ಟದ ಸಮಿತಿ:-
<table>
<tr><td>1</td><td>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು</td><td>ಅಧ್ಯಕ್ಷರು</td></tr>
<tr><td>2</td><td>ಆಯುಕ್ತರು, ಭೂ ಮಾಪನ ಇಲಾಖೆ</td><td>ಸದಸ್ಯರು</td></tr>
<tr><td>3</td><td>ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ</td><td>ಸದಸ್ಯರು</td></tr>
<tr><td>4</td><td>ಜಂಟಿ ನಿರ್ದೇಶಕರು,<br>ಭೂ ಮಾಪನ ಆಯುಕ್ತರು,<br>ಧಾರ್ಮಿಕ ದತ್ತಿ ಇಲಾಖೆ,<br>ಬೆಂಗಳೂರು</td><td>ಸದಸ್ಯ ಕಾರ್ಯದರ್ಶಿ</td></tr>
</table>
ಜಿಲ್ಲಾ ಮಟ್ಟದ ಸಮಿತಿ:-
<table>
<tr><td>1</td><td>ಜಿಲ್ಲಾಧಿಕಾರಿ</td><td>ಅಧ್ಯಕ್ಷರು</td></tr>
<tr><td>2</td><td>ಅಪರ ಜಿಲ್ಲಾಧಿಕಾರಿ</td><td>ಸದಸ್ಯರು</td></tr>
<tr><td>3</td><td>. ಉಪ ವಿಭಾಗಾಧಿಕಾರಿ</td><td>ಸದಸ್ಯರು</td></tr>
<tr><td>4</td><td>ಯೋಜನಾ ನಿರ್ದೇಶಕರು,<br>ಜಿಲ್ಲಾ ನಗರಾಭಿವೃದ್ಧಿ ಕೋಶ<br>ಸ್ಥಳೀಯ ಸಂಸ್ಥೆ<br>ಕೋಶ (ಸ್ಥಳೀಯ ಸಂಸ್ಥೆ)</td><td>ಸದಸ್ಯರು</td></tr>
<tr><td>5</td><td>ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು</td><td>ಸದಸ್ಯ ಕಾರ್ಯದರ್ಶಿ</td></tr>
</table>
ಈ ಸಂಬಂಧವಾಗಿ ಜಿಲ್ಲಾಧಿಕಾರಿಗಳು ಅವರ ಹಂತದಲ್ಲಿ ಸಭೆಯನ್ನು ಜರುಗಿಸಿ ಜಿಲ್ಲಾಮಟ್ಟದಲ್ಲಿ ಕ್ರಮವಹಿಸಿರುತ್ತಾರೆ.<br><br>
ಮಾನ್ಯ ಉಚ್ಚನ್ಯಾಯಾಲಯದ ಪ್ರಕರಣ ಸಂಖ್ಯೆ: WP27/2018(LB-RES) ದಿನಾಂಕ:14-09-2023ರ ಆದೇಶದ ಅನ್ವಯ ದೇವಾಲಯದ ಹೆಸರಿಗೆ ಖಾತೆ ದಾಖಲು ಮಾಡಿ ದೇವಾಲಯದ ಹೆಸರು- ಧಾರ್ಮಿಕ ದತ್ತಿ ಇಲಾಖೆ ಎಂದು ಪಹಣಿಯಲ್ಲಿ ನಮೂದಿಸುವ ಬಗ್ಗೆ ಕ್ರಮವಹಿಸಿ ಪಾಲನಾ ವರದಿಯನ್ನು ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.<br><br>
ಮುಜರಾಯಿ ದೇವಾಲಯಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಆಸ್ತಿಗಳ ಇಂಡೀಕರಣ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ದೇವಾಲಯದ ಹೆಸರುಗಳನ್ನು ಪಹಣಿಗಳಲ್ಲಿ ನಮೂದಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಂದುವರೆದು, ಆಸ್ತಿಗಳನ್ನು ಅನಧಿಕೃತದಾರರಿಂದ ವಾಪಸ್ಸು ಪಡೆಯುವ ಸಂಬಂಧ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.
</td></tr>
</table>

ಸಂಖ್ಯೆ: ಕಂಇ 187 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1138

# ಅನುಬಂಧ -03

**ಅನುಬಂಧ(ಜಿಲ್ಲಾವಾರು ಒತ್ತುವರಿ ಆಗಿರುವ ದೇವಾಲಯಗಳ ಆಸ್ತಿಗಳ ಸಂಖ್ಯೆ)**

| S.No | District | Total |
|---|---|---|
| 1 | Bagalkote | 1 |
| 2 | Bengaluru Urban | 17 |
| | Bengaluru corporation | 35 |
| 3 | Bengaluru Rural | 5 |
| 4 | Belagavi | 0 |
| 5 | Bellary | 0 |
| 6 | Bidar | 1 |
| 7 | Chamarajnagar | 13 |
| 8 | Chikkaballapur | 0 |
| 9 | Chikkamangaluru | 18 |
| 10 | chitradurga | 0 |
| 11 | Dakshina Kannada | 5 |
| 12 | Davanagere | 3 |
| 13 | Dharwad | 0 |
| 14 | Gadag | 0 |
| 15 | Hassan | 75 |
| 16 | Haveri | 0 |
| 17 | Kodagu | 4 |
| 18 | Kolar | 0 |
| 19 | Koppala | 0 |
| 20 | Mandhya | 1 |
| 21 | Mysuru | 0 |
| 22 | Raichur | 0 |
| 23 | Ramanagar | 26 |
| 24 | Shivamoga | 0 |
| 25 | Tumkur | 12 |
| 26 | Udupi | 6 |
| 27 | Uttara Kannada | 0 |
| 28 | Vijayanagar | 0 |
| 29 | Vijayapura | 10 |
| 30 | kalburgi | 0 |
| 31 | Yadgiri | 4 |
| Total | | 236 |

[illegible]
13/12/24.